**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 09-09-2025:**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಅಲ್ಲಿ ಸ್ಥಳೀಯರಲ್ಲಿ ನಿರ್ವಾಣಿಗೌಡರ ಜೋಳದ ಹೊಲ ಎಲ್ಲಿದೆ ಎಂದು ಕೇಳಿದೆನು. ಅವರಿಂದ ಮಾಹಿತಿ ಪಡೆದು ಅವರ ಜೋಳದ ಹೊಲಕ್ಕೆ ಹೋದೆನು. ಅಲ್ಲಿ ಒಬ್ಬ ವ್ಯಕ್ತಿ ನಿಂತಿದ್ದು ಆ ವ್ಯಕ್ತಿಯ ಹೆಸರು ವಿಳಾಸ ಕೇಳಿದಾಗ ತನ್ನ ಹೆಸರು ನಿರ್ವಾಣಿಗೌಡ ತಂದೆ ಈರೇಗೌಡ ಎಂದು ತಿಳಿಸಿದರು. ಆ ವ್ಯಕ್ತಿಗೆ ನಾವು ಬಂದಂತಹ ವಿಚಾರವನ್ನು ತಿಳಿಸಿದೆನು. ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೇಯಲು ಸಮಯವಿಲ್ಲದ ಕಾರಣ ನಾನೇ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ಆ ಜೋಳದ ಹೊಲವನ್ನು ಸಿಬ್ಬಂದಿಗಳೊಂದಿಗೆ ಶೋಧಿಸಿದೆನು. ಅಲ್ಲಿ ಸುಮಾರು 4 ಅಡಿ ಎತ್ತರ ಇರುವ ಹೂವು ಮೊಗ್ಗು ಎಲೆ, ಬೀಜಗಳಿದ್ದ ಸುಮಾರು 31 ಗಾಂಜಾ ಗಿಡಗಳು ಇರುವುದು ಕಂಡುಬಂತು. ನಂತರ ಅಬಕಾರಿ ಉಪಾಧೀಕ್ಷಕರಿಗೆ ದೂರವಾಣಿ ಮೂಲಕ ವಿಷಯವನ್ನು ತಿಳಿಸಿದನು ಮತ್ತು ಹಾಸನ ತಾಲ್ಲೂಕು ತಹಶೀಲ್ದಾರರಿಗೆ ಮಾಹಿತಿ ನೀಡಿ ಆ ಸ್ಥಳವ್ಯಾಪ್ತಿಯ ಗ್ರಾಮಲೆಕ್ಕಾಧಿಕಾರಿಗಳು ಮತ್ತು ರಾಜಸ್ವ ನಿರೀಕ್ಷಕರನ್ನು ಸ್ಥಳಕ್ಕೆ ಕರೆಸುವಂತೆ ಕೇಳಿಕೊಂಡೆನು. ತಹಶೀಲ್ದಾರರು ಅವರಿಬ್ಬರನ್ನು ಕಳುಹಿಸಿಕೊಟ್ಟರು. ನಂತರ ರಾಜಸ್ವ ನಿರೀಕ್ಷಕರಾದ ಚಾಸಾ-1 ಮತ್ತು ಗ್ರಾಮ ಲೆಕ್ಕಿಗರಾದ ಚಾಸಾ-2ರವರು ಸ್ಥಳಕ್ಕೆ ಬಂದ ನಂತರ ಸ್ಥಳೀಯರು ಪಂಚರಾಗಿ ಬರಲು ಒಪ್ಪದೇ ಇದ್ದ ಕಾರಣ ಚಾಸಾ-1 ಮತ್ತು 2 ರವರನ್ನು ಪಂಚರಾಗಿ ಮಾಡಿಕೊಂಡು ಆ ಜೋಳದ ಹೊಲದಲ್ಲಿದ್ದ 31 ಗಾಂಜಾ ಗಿಡಗಳನ್ನು ಬೇರುಸಮೇತ ಕಿತ್ತು ತೂಕಮಾಪನದಲ್ಲಿ ತೂಕ ಮಾಡಿದಾಗ ಒಟ್ಟು 920ಗ್ರಾಂ ಹಸಿಗಾಂಜಾ ಇರುವುದು ಕಂಡುಬಂತು. ಆರೋಪಿತರಲ್ಲಿ ಅದನ್ನು ಬೆಳೆಯಲು ಪರವಾನಿಗೆ ಇದೆಯಾ ಎಂದು ಕೇಳಿದಾಗ ಇಲ್ಲ ಎಂದು ಹೇಳಿದರು. ಗ್ರಾಮಲೆಕ್ಕಾಧಿಕಾರಿಯಲ್ಲಿ ಆ ಹೊಲದ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಕೇಳಿದಾಗ ಸರ್ವೆ ನಂಬರ್ 107 ಮತ್ತು ವಿಸ್ತೀರ್ಣ 3 ಎಕರೆ 1 ಗುಂಟೆ ಎಂದು ಹೇಳಿದರು. ಆರೋಪಿ ಕೂಡ ಅದು ತನ್ನದೇ ಜಮೀನು ಎಂದು ಹೇಳಿದರು.

ನಂತರ ರಾಸಾಯನಿಕ ಪರೀಕ್ಷೆಗಾಗಿ ಮಾದರಿಯಾಗಿ ತಲಾ 100ಗ್ರಾಂ ನಂತೆ ಎರಡು ಕವರಿನಲ್ಲಿ ಮಾದರಿಯಾಗಿ ತೆಗೆದು ಪ್ಯಾಕು ಮಾಡಿ ಇಲಾಖಾ ಸೀಲು ಮಾಡಿದೆನು. ನಂತರ ಆರೋಪಿತರನ್ನು ಸ್ಥಳದಲ್ಲೇ ದಸ್ತಗಿರಿ ಮಾಡಿದೆನು. ಎಲ್ಲಾ ವಸ್ತುಗಳನ್ನು ವಶಪಡಿಸಿಕೊಂಡು ಸ್ಥಳದಲ್ಲಿ ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-1 ರಂತೆ ಪಂಚನಾಮೆ ನಡೆಸಿದೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-1(ಎಫ್) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ವಸ್ತುಗಳು ಹಾಗೂ ಆರೋಪಿತರೊಂದಿಗೆ ಕಛೇರಿಗೆ ವಾಪಸ್ ಬಂದು ಸ್ವದೂರುದಾರನಾಗಿ ವರದಿಯನ್ನು ನಿಪಿ-11ರಂತೆ ತಯಾರಿಸಿ ಮೊ.ಸಂ.8/2021ರಂತೆ ಕೇಸು ದಾಖಲಿಸಿ ನಿಪಿ-12ರಂತೆ ಪ್ರ.ವ.ವ.ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆನು. ನಿಪಿ-11 ಮತ್ತು 12 ರಲ್ಲಿ ನನ್ನ ರುಜುಗಳಿದ್ದು ಕ್ರಮವಾಗಿ ನಿಪಿ-11(ಎ) ಮತ್ತು 12(ಎ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಮಾಲುಗಳನ್ನು ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು. ಆ ದಿವಸ ನಾನು ತಯಾರಿಸಿದ ಶೋಧನಾ ಸಮುಚಿತ ಆಧಾರ ಈಗ ನಾನು ನೋಡುತ್ತಿರುವ ನಿಪಿ-2 ಆಗಿರುತ್ತದೆ. ಅದಕ್ಕೆ ನನ್ನ ಸಹಿ ಹಾಕಿದ್ದು ಆರೋಪಿತರ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಆರೋಪಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ನಿಪಿ-1ರಲ್ಲಿ ಆರೋಪಿತರ ರುಜು ಇದ್ದು ಅದನ್ನು ನಿಪಿ-1(ಜಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಆರೋಪಿತರನ್ನು ವಿಚಾರಿಸಿ ಅವರ ಸ್ವಇಚ್ಛಾ ಹೇಳಿಕೆ ಮಾಡಿಕೊಂಡೆನು. ಅದನ್ನು ಈಗ ನೋಡುತ್ತಿದ್ದು ನಿಪಿ-13 ಎಂದು ಗುರುತಿಸಲಾಯಿತು. ಅದಕ್ಕೆ ನಾನು ಸಹಿ ಹಾಕಿದ್ದು ಆರೋಪಿತರ ಸಹಿ ಪಡೆದಿರುತ್ತೇನೆ. ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಆರೋಪಿತರ ಸಹಿಯನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು. ಚಾಸಾ-1 ಮತ್ತು 2 ರವರಿಗೆ ನೀಡಿರುವ ನೋಟೀಸನ್ನು ನೋಡುತ್ತಿದ್ದು ನಿಪಿ-14 ಮತ್ತು 15 ಎಂದು ಅದರಲ್ಲಿ ನನ್ನ ಮತ್ತು ಪಂಚರ ಸಹಿ ಇದ್ದು ಅವುಗಳನ್ನು ಕ್ರಮವಾಗಿ ನಿಪಿ-14(ಎ), 14(ಬಿ) ಮತ್ತು 15(ಎ) 15(ಬಿ) ಎಂದು ಗುರುತಿಸಲಾಯಿತು. ಮಹಜರ್ ಕಾಲದಲ್ಲಿ ಫೊ ೀಟೋಗಳನ್ನು ತೆಗೆಸಿರುತ್ತೇನೆ. ಈಗ ನೋಡುತ್ತಿರುವ 3 ಫೋಟೋಗಳು

ಅದೇ ಸಮಯದಲ್ಲಿ ತೆಗೆದ ಫೋಟೋಗಳಾಗಿರುತ್ತವೆ. ಅವುಗಳನ್ನು ನಿಪಿ-16 ರಿಂದ 18 ಎಂದು ಗುರುತಿಸಲಾಯಿತು. ಆ ದಿವಸ ಸ್ಥಳದಲ್ಲಿದ್ದ ನಿರ್ವಾಣಿಗೌಡರನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈ ದಿವಸ ನ್ಯಾಯಾಲಯದ ಮುಂದಿರುವ ಆರೋಪಿತರು. ಆ ದಿವಸ ವಶಪಡಿಸಿಕೊಂಡ ಮಾದರಿ ಗಾಂಜಾ ನೋಡಿದರೆ ಗುರುತಿಸುತ್ತೇನೆ. ಅವು ಎಂ.ಒ.1 ಮತ್ತು 2 ಆಗಿರುತ್ತವೆ. ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಚೀಟಿಗಳನ್ನು ಎಂ.ಒ.1(ಎ) ಮತ್ತು 2(ಎ) ಎಂದು ಸಾಕ್ಷಿಯ ಸಹಿಗಳನ್ನು ಎಂ.ಒ.1(1ಬಿ) ಮತ್ತು 2(ಬಿ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಯನ್ನು ಚಾಸಾ-9ರವರಿಗೆ ವಹಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಆ ದಿವಸ ನಮ್ಮ ಕಛೇರಿಯಿಂದ ನಾನು, 3 ಜನ ಸಿಬ್ಬಂದಿಗಳು ಹಾಗೂ ಚಾಲಕ ಒಟ್ಟು 5 ಜನ ಹೋಗಿರುತ್ತೇವೆ. ಚಾಲಕನ ಹೆಸರು ಪುಟ್ಟಸ್ವಾಮಿ. ಅವರು ಮಹಜರ್ ಕ್ರಮದಲ್ಲಿ ಭಾಗಿಯಾಗಿಲ್ಲ. ಆ ದಿವಸ ನಾವು ಹೋದ ಜೀಪಿನ ನಂಬರ್ ಕೆಎ-13-ಜಿ-1143. ಆ ದಿವಸ ಜೀಪು ಎಲ್ಲೆಲ್ಲಿ ಹೋಗಿತ್ತು ಎನ್ನುವ ಬಗ್ಗೆ ಲಾಗ್ ಶೀಟ್ ನಲ್ಲಿ ನಮೂದಾಗಿರುತ್ತದೆ. ನಿಪಿ-14 ಮತ್ತು 15 ರಲ್ಲಿ ನಾನು ಸ್ಥಳೀಯರಾದ ನೀವು ಪಂಚರಾಗಿ ಸಹಕರಿಸಬೇಕೆಂದು ಹೇಳಿರುತ್ತೇನೆಂದರೆ ಸರಿ. ಸದರಿಯವರು ಸ್ಥಳೀಯರಲ್ಲ, ಸರ್ಕಾರಿ ನೌಕರರು ಎಂದರೆ ಸರಿ. ನಾನು ತಹಶೀಲ್ದಾರರಿಗೆ ಕೋರಿಕೆ ಕೊಟ್ಟಿದ್ದೆನು, ಅದರಂತೆ ಅವರಿಬ್ಬರೂ ಸ್ಥಳಕ್ಕೆ ಬಂದಾಗಿತ್ತು.

2.ಎನ್ ಡಿ ಪಿ ಎಸ್ ಕಾಯಿದೆ ಪ್ರಕಾರ ನಾವು ದಾಳಿಗೆ ಸ್ಥಳಕ್ಕೆ ಹೋಗುವಾಗ ಜೊತೆಯಲ್ಲಿ ಪತ್ರಾಂಕಿತ ಅಧಿಕಾರಿಗಳನ್ನು ಕರೆದುಕೊಂಡು ಹೋಗಬೇಕು ಎಂದರೆ ಸರಿ. ನಾನು ಸ್ಥಳದಲ್ಲಿ ಮಹಜರ್ ಜರುಗಿಸಿದ ನಂತರ ಪತ್ರಾಂಕಿತ ಅಧಿಕಾರಿ ಸ್ಥಳಕ್ಕೆ ಬಂದದ್ದು ಎಂದರೆ ಸರಿಯಲ್ಲ. ಶೋಧನೆ ಮಾಡುವುದಕ್ಕಿಂತ ಮೊದಲು ನಮ್ಮ ಅಂಗಶೋಧನೆ ಮಾಡಿಕೊಂಡಿರುತ್ತೇವೆ. ಈ ವಿಚಾರ ಮಹಜರಿನಲ್ಲಿ ಕಾಣಿಸಿಲ್ಲ. ಯಾರುಯಾರು ಯಾರ

ಯಾರ ಅಂಗಶೋಧನೆ ಮಾಡಿಕೊಂಡಿವೆಂದು ಪ್ರತ್ಯೇಕ ಮಹಜರು ಮಾಡಿಲ್ಲ. 31 ಗಿಡಗಳು 3 ಎಕರೆ 1 ಗುಂಟೆ ವಿಸ್ತೀರ್ಣದಲ್ಲಿ ಎಲ್ಲೆಲ್ಲಿ ಇತ್ತೆಂದು ಹೇಳಬಹುದಾ ಎಂದರೆ ಸಾಕ್ಷಿಯು ಪೂರ್ತ ವಿಸ್ತೀರ್ಣವನ್ನು ಶೋಧನೆ ಮಾಡಿದಾಗ ಅಲ್ಲಲ್ಲಿ ಇದ್ದವು ಎನ್ನುತ್ತಾರೆ. ಆ ಗಿಡಗಳು ಎಲ್ಲೆಲ್ಲಿ ಸಿಕ್ಕಿದವೋ ಅಲ್ಲಿ ಪ್ರತ್ಯೇಕ ಮಹಜರು ಕೂಡ ಮಾಡಿಲ್ಲ, ಫೋಟೋ ಕೂಡ ತೆಗೆಸಿಲ್ಲ. ಪತ್ರಾಂಕಿತ ಅಧಿಕಾರಿ ಮಹಜರಿಗೆ ಸಹಿ ಮಾಡಿಲ್ಲ, ಪತ್ರಾಂಕಿತ ಅಧಿಕಾರಿಯಾಗಿ ಅಬಕಾರಿ ನಿರೀಕ್ಷಕರಾದ ರಘು ಎಂ.ಹೆಚ್ ಎನ್ನುವವರು ಇದ್ದರು. ಸದರಿಯವರು ಪತ್ರಾಂಕಿತ ಅಧಿಕಾರಿಯಾಗಿ ಭಾಗವಹಿಸಿದ್ದಾರೆ ಎಂದು ದೋ.ಪಟ್ಟಿಯಲ್ಲಿ ಸಾಕ್ಷಿಯಾಗಿ ಕಾಣಿಸಿಲ್ಲ ಎಂದರೆ ಸರಿ. ಆ ದಿವಸ ರಘು ಎಂ.ಹೆಚ್.ಎಂಬುವವರು ನಮ್ಮ ಜೊತೆ ಪತ್ರಾಂಕಿತ ಅಧಿಕಾರಿಯಾಗಿ ಇದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

3.ಎನ್ ಡಿ ಪಿ ಎಸ್ ಕಾಯಿದೆ ಪ್ರಕಾರ ಅದೇ ಇಲಾಖೆಯ ಅಧಿಕಾರಿಯನ್ನು ಪತ್ರಾಂಕಿತ ಅಧಿಕಾರಿಯನ್ನಾಗಿ ಕರೆದುಕೊಂಡು ಹೋಗಲು ಬರುವುದಿಲ್ಲ ಎಂದರೆ ಸರಿಯಲ್ಲ. ರಘು ಎಂ. ಹೆಚ್ ರವರು ಸಹ ದಾಳಿಯಲ್ಲಿ ಭಾಗವಹಿಸಿದ್ದರು. ಆ ದಿವಸ ನಾವು ನಂಜದೇವರಕಾವಲಿಗೆ ಹೋದೆವು, ಅಲ್ಲಿ ಸರ್ವೆನಂಬರ್ 107ರ 3 ಎಕರೆ ಒಂದು ಗುಂಟೆಯಲ್ಲಿ 31 ಗಾಂಜಾ ಗಿಡಗಳು ಇದ್ದವು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ತೂಕಮಾಪನವನ್ನು ನಾವು ನಮ್ಮ ಜೊತೆಯಲ್ಲೇ ತೆಗೆದುಕೊಂಡು ಹೋಗಿದ್ದೆವು.ಅದು ಪ್ರತಿವರ್ಷ ತೂಕಮಾಪನ ಇಲಾಖೆಯಿಂದ ಪರಿಶೀಲನೆಗೊಳಪಟ್ಟು ದೃಡಪತ್ರ ನೀಡಿದ್ದಾರೋ ಎನ್ನುವುದು ಗೊತ್ತಿಲ್ಲ. ಮಹಜರಿನಲ್ಲಿ ಅದು ನಮ್ಮ ಇಲಾಖೆಗೆ ಸೇರಿದ್ದೆಂದು ನಮೂದಿಸಿಲ್ಲ. ಇಲಾಖಾ ಅಂಕಿಅಂಶಕ್ಕೋಸ್ಕರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ.ಒ.1(ಎ) ಮತ್ತು 2(ಎ) ರಲ್ಲಿ ಪಂಚರ ಹಾಗೂ ಸಾಕ್ಷಿದಾರರ ಸಹಿ ಇಲ್ಲ ಎಂದರೆ ಸರಿಯಲ್ಲ. ಇದನ್ನು ಸ್ಥಳದಲ್ಲೇ ತೆಗೆದೆವು ಎನ್ನುವ ಬಗ್ಗೆ ಅದರಲ್ಲಿ ಯಾವುದೇನಿಖರವಾದ ಗುರುತು ಇಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**